1562 = (68)
2330 LRK 010126

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರು, ಶ್ರೀ ಎನ್.ರವಿಕುಮಾರ್, ವಿರೋಧ ಪಕ್ಷದ ಮುಖ್ಯ ಸಚೇತರರು, ಹಾಗೂ ಇತರರು ನಿಯಮ 59 ರಡಿ ಗಮನ ಸೆಳೆಯುವ ಸೂಚನೆಗೆ ಮಾಹಿತಿ.**

## ವಿಷಯ:

ರಾಜ್ಯಾದ್ಯಂತ ರೈತರು ಹಲವು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದು, ರೈತರ ಆತ್ಮಹತ್ಯೆಯ ಪ್ರಕರಣಗಳು ಆತಂಕಕಾರಿ ಮಟ್ಟಕ್ಕೆ ಏರಿಕೆಯಾಗಿದೆ. ಕೃಷಿಗೆ ರಸಗೊಬ್ಬರಗಳ ಕೊರತೆ, ನೀರಾವರಿ ಸಮಸ್ಯೆ, ಕಳಪೆ ಬಿತ್ತನೆ ಬೀಜಗಳ ಸರಬರಾಜು, ಕೃಷಿ ಉತ್ಪನ್ನಗಳ ಬೆಲೆ ಕುಸಿತ, ಕೃಷಿಗೆ ಸಂಬಂಧಿತ ಯೋಜನೆಗಳಲ್ಲಿ ಅನುದಾನ ಕಡಿತ, ಗ್ರಾಮೀಣ ಭಾಗದಲ್ಲಿ ವಿದ್ಯುತ್ ಪೂರೈಕೆ ಸಮಸ್ಯೆ, ವಿದ್ಯುತ್ ಪರಿವರ್ತಕಗಳ ಅಳವಡಿಕೆಗೆ ದರ ಹೆಚ್ಚಳ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಅನುಷ್ಠಾನದ ಅಸಮರ್ಪಕ ನಿರ್ವಹಣೆ ಮುಂತಾದ ಸಮಸ್ಯೆಗಳು ರೈತರನ್ನು ಸಂಕಷ್ಟಕ್ಕೆ ತಳ್ಳಿದೆ. ಆದ್ದರಿಂದ ಇಂತಹ ಗಂಭಿರ ಪರಿಸ್ಥಿತಿಯಲ್ಲಿ ಸರ್ಕಾರದಿಂದ ತಕ್ಷಣದ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು ಅತ್ಯಂತ ಅನಿವಾರ್ಯವಾಗಿದೆ. ರೈತರ ಜೀವನ, ಕೃಷಿ ಉತ್ಪಾದಕತೆ ಹಾಗೂ ಗ್ರಾಮೀಣ ಆರ್ಥಿಕತೆಯ ಸ್ಥಿರತೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಕುರಿತು ದಿನಾಂಕ:18-8-2025ರಂದು ಸದನದಲ್ಲಿ ವಿಷಯವನ್ನು ಚರ್ಚಿಸಲು ಅನುಮತಿ ನೀಡಬೇಕೆಂದು ಕೋರುತ್ತೇವೆ.

## ಉತ್ತರ:

**ಕೃಷಿ ಇಲಾಖೆ:**

ಬಿತ್ತನೆ ಬೀಜ ಮತ್ತು ರಸಗೊಬ್ಬರ ವಿತರಣೆ ಸಂಬಂಧ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ.

**ರಸಗೊಬ್ಬರ:**

ಸಾಮಾನ್ಯವಾಗಿ ವಿವಿಧ ಬೆಳೆಗಳಿಗೆ ಬಿತ್ತನೆ/ನಾಟಿ ಸಮಯದಲ್ಲಿ ಬೆಳೆಗಳಿಗೆ ಮೂಲ ಗೊಬ್ಬರವಾಗಿ(basal dose) ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಸಾರಜನಕ, ರಂಜಕ ಮತ್ತು ಪೊಟ್ಯಾಷ್(NPK) ಪೋಷಕಾಂಶವಿರುವ ರಸಗೊಬ್ಬರವನ್ನು ಉಪಯೋಗಿಸುತ್ತಾರೆ.

- ಮುಂಗಾರು ಪ್ರಾರಂಭದಲ್ಲಿ ಸ್ವಲ್ಪ ಮಟ್ಟಿಗೆ ಡಿ.ಎ.ಪಿ ಕೊರತೆಯಾದ ಸಂದರ್ಭದಲ್ಲಿ ಇಲಾಖೆಯಿಂದ ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಕಾಂಪ್ಲೆಕ್ಸ್(complex) ರಸಗೊಬ್ಬರ ಬಳಸುವುದರ ಬಗ್ಗೆ ರೈತರಿಗೆ ಅರಿವು ಮೂಡಿಸಿ ಡಿ.ಎ.ಪಿ ರಸಗೊಬ್ಬರದ ಕೊರತೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಪ್ರಸ್ತುತ ಸಾಲಿನ ಮುಂಗಾರು ಹಂಗಾಮಿನಲ್ಲಿ ಏಪ್ರಿಲ್-2025 ರಿಂದ ಜುಲೈ-2025 ರವರೆಗೆ ಕೇಂದ್ರ ಸರ್ಕಾರದ ಸರಬರಾಜಿನಲ್ಲಿ 0.71 ಲಕ್ಷ ಮೆ.ಟನ್ ಪ್ರಮಾಣದ ಡಿ.ಎ.ಪಿ ರಸಗೊಬ್ಬರದ ಕೊರತೆಯಾಗಿರುತ್ತದೆ.
- ಬಿತ್ತನೆಯಾದ ಬೆಳೆಗಳು ಬೆಳವಣಿಗೆಯ ಹಂತದಲ್ಲಿದ್ದು (25-50 days), ಮೇಲುಗೊಬ್ಬರವಾಗಿ ಸಾರಜನಕವಿರುವ ಯೂರಿಯಾ ಗೊಬ್ಬರವನ್ನು ನೀಡಬೇಕಾಗಿರುತ್ತದೆ. ರಾಜ್ಯಾದ್ಯಂತ ದೂರದರ್ಶನ, ಕರಪತ್ರಗಳು, ದಿನಪತ್ರಿಕೆಯಲ್ಲಿ

ಲೇಖನಗಳ ಮುಖಾಂತರ ಯೂರಿಯಾ ರಸಗೊಬ್ಬರದ ವಿವೇಚನಾತ್ಮಕ ಬಳಕೆ ಮತ್ತು ಯೂರಿಯಾ ರಸಗೊಬ್ಬರಕ್ಕೆ ಪರ್ಯಾಯವಾಗಿ ನ್ಯಾನೋ ಯೂರಿಯಾವನ್ನು ಮೇಲುಗೊಬ್ಬರವಾಗಿ ಬಳಕೆ ಮಾಡುವುದರ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

**ರಾಜ್ಯದಲ್ಲಿ ಯೂರಿಯಾ ಬೇಡಿಕೆ ಹೆಚ್ಚಾಗಿರುವುದಕ್ಕೆ ಕಾರಣಗಳು:**

- ರಾಜ್ಯದಲ್ಲಿ ಪೂರ್ವ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗಿದ್ದು, ಸಾಮಾನ್ಯ ಅವಧಿಗಿಂತ ಮುಂಚೆಯೇ ಬಿತ್ತನೆ ಪ್ರಾರಂಭವಾಗಿದೆ.
- ಬಿತ್ತನೆ ವಿಸ್ತೀರ್ಣವು ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಹೆಚ್ಚಾಗಿರುತ್ತದೆ.
- ಹೆಚ್ಚು ರಸಗೊಬ್ಬರ ಅವಶ್ಯವಿರುವ ಮುಸುಕಿನ ಜೋಳದ ವಿಸ್ತೀರ್ಣವು ಗಣನೀಯವಾಗಿ ಹೆಚ್ಚಳವಾಗಿರುತ್ತದೆ(ಅಂದಾಜು 2.00ಲಕ್ಷ ಹೆಕ್ಟೇರ್)
- ಅಂದಾಜು 13,000 ಹೆಕ್ಟೇರ್ ಪ್ರದೇಶದಲ್ಲಿ ಮರುಬಿತ್ತನೆ ಕೈಗೊಳ್ಳಲಾಗಿರುತ್ತದೆ (ಧಾರವಾಡ & ಗದಗ ಜಿಲ್ಲೆಗಳಲ್ಲಿ)
- ಅವಧಿಗಿಂತ ಮುಂಚಿತವಾಗಿ ಪ್ರಮುಖ ಜಲಾಶಯಗಳಿಂದ (ತುಂಗಭದ್ರಾ, ಕೃಷ್ಣಾ , ಕಾವೇರಿ ಇತ್ಯಾದಿ) ಅಚ್ಚುಕಟ್ಟು ಪ್ರದೇಶಗಳಿಗೆ ನೀರನ್ನು ಬಿಟ್ಟಿರುವುದರಿಂದ ಮುಂಚಿತವಾಗಿಯೇ ನಾಟಿ ಕೈಗೊಳ್ಳಲಾಗಿರುತ್ತದೆ.
- ಮುಂಗಾರು ಹಂಗಾಮಿಗೆ 12.95 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಬೇಡಿಕೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.
- ಕೇಂದ್ರ ಸರ್ಕಾರದಿಂದ 11.17 ಲಕ್ಷ ಮೆ.ಟನ್ (ಏಪ್ರಿಲ್-2025 ರಿಂದ ಸೆಪ್ಟೆಂಬರ್-2025ರವರೆಗೆ) ಯೂರಿಯಾ ರಸಗೊಬ್ಬರವನ್ನು ಹಂಚಿಕೆ ಮಾಡಲಾಗಿರುತ್ತದೆ.
- ಏಪ್ರಿಲ್ ಮಾಹೆಯಿಂದ ಜುಲೈ-2025ರ ಮಾಹೆಯವರೆಗೆ 6.80 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಬೇಡಿಕೆ ಇದ್ದು, ಕೇಂದ್ರ ಸರ್ಕಾರದಿಂದ ಜುಲೈ ಅಂತ್ಯದವರೆಗೆ 5.55 ಲಕ್ಷ ಮೆ.ಟನ್ ಸರಬರಾಜಾಗಿದ್ದು (ಆರಂಭಿಕ ಶಿಲ್ಕು 3.46 ಲಕ್ಷ ಮೆ.ಟನ್ ದಿನಾಂಕ 01.4.2025ರಂತೆ) ಅದರನ್ವಯ 7.90 ಲಕ್ಷ ಮೆ.ಟನ್ ಮಾರಾಟವಾಗಿ, 1.10 ಲಕ್ಷ ಮೆ.ಟನ್ ದಾಸ್ತಾನಿರುತ್ತದೆ. ಜುಲೈ-25ರ ವರೆಗೆ ಕೇಂದ್ರ ಸರ್ಕಾರದ ಸರಬರಾಜಿನಲ್ಲಿ 1.27 ಲಕ್ಷ ಮೆ.ಟನ್ ಪ್ರಮಾಣದ ಯೂರಿಯಾ ರಸಗೊಬ್ಬರದ ಕೊರತೆಯಾಗಿರುತ್ತದೆ(ಅನುಬಂಧ-1).
- ಆಗಸ್ಟ್-2025ರ ಮಾಹೆಗೆ 2.23 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಬೇಡಿಕೆಗೆ, ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ 0.99 ಲಕ್ಷ ಮೆ.ಟನ್ ಸರಬರಾಜಾಗಿದ್ದು, 4,839 ಮೆ.ಟನ್ ಯೂರಿಯಾ ರಸಗೊಬ್ಬರವು ಸಾಗಾಣೆಯ ಹಂತದಲ್ಲಿದ್ದು,(In transit) ಆಗಸ್ಟ್ ಮಾಹೆಗೆ ಕೇಂದ್ರ ಸರ್ಕಾರದಿಂದ ಇನ್ನೂ 1.24 ಲಕ್ಷ ಮೆ.ಟನ್ ಸರಬರಾಜು ಬಾಕಿ ಇರುತ್ತದೆ.
- ಒಟ್ಟಾರೆ ಏಪ್ರಿಲ್ ಮಾಹೆಯಿಂದ ಆಗಸ್ಟ್-2025 ಮಾಹೆಯ ಅಂತ್ಯದವರೆಗೆ 2.51 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಸರಬರಾಜಿಗೆ ಬಾಕಿ ಇರುತ್ತದೆ.
- ಪ್ರಸ್ತುತ ಸಾಲಿನಲ್ಲಿ ಕಳೆದ ಸಾಲುಗಳಲ್ಲಿ ಹೋಲಿಸಿದಲ್ಲಿ ಕಡಿಮೆ (3.46 ಲಕ್ಷ ಮೆ.ಟನ್) ಆರಂಭಿಕ ಶಿಲ್ಕು ಇದ್ದು, ಅತ್ಯಂತ ಕಡಿಮೆ ರಸಗೊಬ್ಬರ ಸರಬರಾಜಾಗಿರುವುದರಿಂದ (5.55 ಲಕ್ಷ ಮೆ.ಟನ್), ಕಡಿಮೆ ದಾಸ್ತಾನಿರುತ್ತದೆ(1.10 ಲಕ್ಷ ಮೆ.ಟನ್)(ಅನುಬಂಧ-2),

**ಇಲಾಖೆಯಿಂದ ತೆಗೆದುಕೊಂಡ ಕ್ರಮಗಳು:**

- ಸನ್ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಕೃಷಿ ಸಚಿವರಿಂದ ರಾಜ್ಯದ ಯೂರಿಯಾ ರಸಗೊಬ್ಬರದ ಬೇಡಿಕೆಗನುಗುಣವಾಗಿ ಪೂರೈಕೆ ಮಾಡಲು ಕೋರಿ ಕೇಂದ್ರ ಸರ್ಕಾರದ ರಸಗೊಬ್ಬರ ಸಚಿವರಿಗೆ ಮನವಿಯನ್ನು ಸಲ್ಲಿಸಲಾಗಿದೆ.

- ಸನ್ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಕೃಷಿ ಸಚಿವರ ನಿರ್ದೇಶನದಂತೆ, ಕೃಷಿ, ಕಂದಾಯ ಮತ್ತು ಪೋಲೀಸ್ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಯೂರಿಯಾ ರಸಗೊಬ್ಬರದ ಅನಧಿಕೃತ ಶೇಖರಣೆ/ಸಂಗ್ರಹಣೆ ಬಗ್ಗೆ ಪರಿಶೀಲನೆಯನ್ನು ನಡೆಸುತ್ತಿದ್ದಾರೆ.

- ಬೇಡಿಕೆಗನುಗುಣವಾಗಿ ರಾಜ್ಯಕ್ಕೆ ಯೂರಿಯಾ ರಸಗೊಬ್ಬರವನ್ನು ಸರಬರಾಜು ಮಾಡಲು ಕೋರಿ ಕೇಂದ್ರ ಸರ್ಕಾರಕ್ಕೆ 06 ಪತ್ರಗಳನ್ನು ಸಲ್ಲಿಸಲಾಗಿದೆ.

- ಕೃಷಿಗೆ ಬಳಸುತ್ತಿರುವ ಸಹಾಯಧನದ ಯೂರಿಯಾ ರಸಗೊಬ್ಬರವನ್ನು ಕೃಷಿಯೇತರ ಚಟುವಟಿಕೆಗಳಿಗೆ ಬಳಕೆಯಾಗುವುದನ್ನು ತಡೆಗಟ್ಟಲು ಜಿಲ್ಲಾ ಮಟ್ಟದಲ್ಲಿ ಕಷಿ ಇಲಾಖೆ, ಪೊಲೀಸ್ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಕಂದಾಯ ಇಲಾಖೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ತಂಡಗಳನ್ನು ರಚಿಸಲಾಗಿದೆ.

- NFSM (ಆಹಾರ ಪೌಷ್ಠಿಕಾಂಶ ಭದ್ರತೆ ಯೋಜನೆಯಡಿ) ನ್ಯಾನೋ ಯೂರಿಯಾದ ಬಳಕೆಯನ್ನು ಉತ್ತೇಜಿಸಲು ರೈತರ ತಾಕುಗಳಲ್ಲಿ ಪ್ರಾತ್ಯಕ್ಷಿಕೆಯನ್ನು (demonstrations) ಕೈಗೊಳ್ಳಲಾಗುತ್ತಿದೆ.

- ಕೇಂದ್ರ ಸರ್ಕಾರದ ರಸಗೊಬ್ಬರ ಇಲಾಖೆಯ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ರಾಜ್ಯದ ಬೇಡಿಕೆಗನುಗುಣವಾಗಿ ಯೂರಿಯಾ ರಸಗೊಬ್ಬರದ ಪೂರೈಕೆಗೆ ಕ್ರಮವಹಿಸಲಾಗಿರುತ್ತದೆ.

- ರಾಜ್ಯದಲ್ಲಿ ಎಲ್ಲಾ ರಸಗೊಬ್ಬರ ಮಾರಾಟಗಾರ ಮಳಿಗೆ/ಗೋದಾಮು, ಯೂರಿಯಾ ಬಳಸುವ ಕೈಗಾರಿಕೆಗಳನ್ನು ಪರಿಶೀಲಿಸುತ್ತಿದ್ದು, ಉಲ್ಲಂಘನೆಗಳು ಕಂಡುಬಂದಲ್ಲಿ ಜಪ್ತು ಮಾಡಲಾಗುತ್ತಿದೆ, ಪರವಾನಗಿಗಳನ್ನು ಅಮಾನತ್ತು/ರದ್ದು ಪಡಿಸಿ ಎಫ್. ಐ.ಆರ್(FIR) ಗಳನ್ನು ದಾಖಲಿಸಲಾಗುತ್ತಿದೆ(6 FIR).

- ಪ್ರತಿದಿನ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಗೂಗಲ್ ಮೀಟ್ ಮೂಲಕ ರಸಗೊಬ್ಬರದ ಲಭ್ಯತೆ ಮತ್ತು ಬೇಡಿಕೆಯ ಬಗ್ಗೆ ಮಾಹಿತಿಯನ್ನು ಪಡೆದು, ಬೇಡಿಕೆಗನುಗುಣವಾಗಿ ಪೂರೈಕೆ ಕ್ರಮವಹಿಸಲಾಗುತ್ತಿದೆ.

- ರಸಗೊಬ್ಬರ ತಯಾರಿಕಾ ಸಂಸ್ಥೆಗಳೊಂದಿಗೆ ಚರ್ಚಿಸಿ ಬೇಡಿಕೆಯಿರುವ ಜಿಲ್ಲೆಗಳಿಗೆ ರಸಗೊಬ್ಬರ ಸರಬರಾಜಿಗೆ ಕ್ರಮವಹಿಸಲಾಗುತ್ತಿದೆ.

- ರಸಗೊಬ್ಬರ ರೇಕುಗಳು ಸಕಾಲದಲ್ಲಿ ನಿಗದಿತ ರೇಕ್ ಪಾಯಿಂಟ್ ತಲುಪಲು ರೈಲ್ವೆ ಅಧಿಕಾರಿಗಳನ್ನು ಸಂಪರ್ಕಿಸಲಾಗುತ್ತಿದೆ.

- ತುರ್ತು ಬೇಡಿಕೆಯಿರುವ ಕಡೆ ಕಾಪು ದಾಸ್ತಾನಿನಿಂದ ಯೂರಿಯಾ ರಸಗೊಬ್ಬರವನ್ನು ಜಿಲ್ಲೆಯಿಂದ ಜಿಲ್ಲೆಗೆ ವರ್ಗಾಯಿಸಲಾಗುತ್ತಿದೆ.

ಅನುಬಂಧ-1: ಮುಂಗಾರು 2025ರ ಹಂಗಾಮಿನಲ್ಲಿ ವಿವಿಧ ರಸಗೊಬ್ಬರಗಳ ಮಾಹೆವಾರು ಬೇಡಿಕೆ, ಹಂಚಿಕೆ, ಸರಬರಾಜು ಮತ್ತು ಕೊರತೆ

(ಮೆ.ಟನ್ ಗಳಲ್ಲಿ)

| ಮುಂಗಾರು 2025 | ಬೇಡಿಕೆ | ಹಂಚಿಕೆ | ಸರಬರಾಜು | ಕೊರತೆ |
|---|---|---|---|---|
| ಏಪ್ರಿಲ್ | 107902 | 108250 | 129173 | 20923 |
| ಮೇ | 129785 | 130400 | 120246 | -10154 |
| ಜೂನ್ | 217182 | 217950 | 138538 | -79412 |
| ಜುಲೈ | 225786 | 225900 | 167080 | -58820 |
| ಒಟ್ಟು | 680655 | 682500 | 555037 | -127463 |

ಅನುಬಂಧ-2: ಕಳೆದ ಐದು ವರ್ಷಗಳಲ್ಲಿ ಪ್ರಾರಂಭಿಕ ಶಿಲ್ಕು , ಸರಬರಾಜು ಮತ್ತು ಮಾರಾಟ ವಿವರಗಳು (ಜುಲೈ ಮಾಹೆಯ ಅಂತ್ಯದವರೆಗೆ)

(ಮೆ.ಟನ್ ಗಳಲ್ಲಿ)

| ವರ್ಷ (ಮುಂಗಾರು) | ಪ್ರಾರಂಭಿಕ ಶಿಲ್ಕು | ಸರಬರಾಜು | ಒಟ್ಟು ದಾಸ್ತಾನು | ಮಾರಾಟ | ಉಳಿಕೆ ದಾಸ್ತಾನು |
|---|---|---|---|---|---|
| 2021 | 412170 | 591597 | 1003767 | 719807 | 283960 |
| 2022 | 312023 | 636966 | 948989 | 740031 | 208958 |
| 2023 | 390540 | 624187 | 1014727 | 637649 | 377078 |
| 2024 | 540609 | 669873 | 1210482 | 710888 | 499594 |
| 2025 | 346499 | 555037 | 901536 | 790567 | 110969 |

2025ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮೇ ಮತ್ತು ಜೂನ್ ಮಾಹೆಗಳಲ್ಲಿ ಬೇಡಿಕೆ ಅಥವಾ ಹಂಚಿಕೆಗೆ ಅನುಗುಣವಾಗಿ ಡಿ.ಎ.ಪಿ ರಸಗೊಬ್ಬರ ಸರಬರಾಜಾಗದ ಕಾರಣ ಮುಂಗಾರು ಬಿತ್ತನೆ ಸಮಯದಲ್ಲಿ ಕೆಲವು ಜಿಲ್ಲೆಗಳಲ್ಲಿ ಡಿ.ಎ.ಪಿ ರಸಗೊಬ್ಬರದ ಕೊರತೆ ಉಂಟಾಗಿತ್ತು. ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಕಾಂಪ್ಲೆಕ್ಸ್ ರಸಗೊಬ್ಬರವನ್ನು ಬಳಸಲು ರೈತರಲ್ಲಿ ವ್ಯಾಪಕ ಪ್ರಚಾರವನ್ನು ನೀಡಿ ಡಿ.ಎ.ಪಿ ರಸಗೊಬ್ಬರದ ಕೊರತೆಯನ್ನು ನಿಭಾಯಿಸಲಾಗಿದೆ. ಮುಂದುವರೆದು, ಡಿ.ಎ.ಪಿ ಪೂರೈಕೆ ಪ್ರಕ್ರಿಯೆ ಜಾರಿಯಲ್ಲಿದ್ದು ಬೇಡಿಕೆಗನುಗುಣವಾಗಿ ಸರಬರಾಜಾಗುತ್ತಿದೆ.

**ಬಿತ್ತನೆ ಬೀಜ :**

ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳ ವಿತರಣೆ:

- 2025 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 4.63 ಲಕ್ಷ ಕ್ವಿಂ. ವಿವಿಧ ಬೆಳೆಗಳ ಬಿತ್ತನೆ ಬೀಜಗಳ ಬೇಡಿಕೆ ಇರುತ್ತದೆ.
- 6.67 ಲಕ್ಷ ಕ್ವಿಂ. ಬಿತ್ತನೆ ಬೀಜಗಳು ಲಭ್ಯವಿರುತ್ತದೆ.
- ದಿನಾಂಕ: 17.08.2025 ರವರೆಗೆ ರೈತ ಸಂಪರ್ಕ ಕೇಂದ್ರಗಳಲ್ಲಿ 321945.13 ಕ್ವಿಂಟಾಲ್ ಗಳಷ್ಟು ವಿವಿಧ ಬೆಳೆಗಳ ಬಿತ್ತನೆ ಬೀಜಗಳನ್ನು ವಿತರಣೆ ಮಾಡಲಾಗಿದೆ.

- 47,678 ಕ್ವಿಂಟಾಲ್ ಗಳಷ್ಟು ದಾಸ್ತಾನು ರೈತ ಸಂಪರ್ಕ ಕೇಂದ್ರಗಳಲ್ಲಿ ಇರುತ್ತದೆ. ಉಳಿದ ಪ್ರಮಾಣ ಸಂಬಂಧಿಸಿದ ಬಿತ್ತನೆ ಬೀಜ ಸರಬರಾಜು ಸಂಸ್ಥೆಗಳಲ್ಲಿ ಲಭ್ಯವಿದ್ದು, ಜಿಲ್ಲೆಗಳ ಬೇಡಿಕೆಗೆ ಅನುಗುಣವಾಗಿ ರೈತ ಸಂಪರ್ಕ ಕೇಂದ್ರಗಳಿಗೆ ಸರಬರಾಜು ಮಾಡಲಾಗುವುದು.
- ಇಲ್ಲಿಯವರೆವಿಗೆ ಒಟ್ಟು 7.19 ಲಕ್ಷ ಫಲಾನುಭವಿಗಳಿಗೆ ಬಿತ್ತನೆ ಬೀಜಗಳನ್ನು ವಿತರಿಸಲಾಗಿರುತ್ತದೆ.
- ಬಿತ್ತನೆ ಬೀಜ ವಿತರಣೆ ಕಾರ್ಯ ಪ್ರಗತಿಯಲ್ಲಿದ್ದು, ಯಾವುದೇ ಕೊರತೆಯಿರುವುದಿಲ್ಲ.

**ಸೋಯಾ ಅವರೆ:** 2025ರ ಮುಂಗಾರು ಹಂಗಾಮಿನಲ್ಲಿ ಸೋಯಾ ಅವರೆ ಬಿತ್ತನೆ ಬೀಜಗಳನ್ನು ಹೊರತುಪಡಿಸಿ ಯಾವುದೇ ಬಿತ್ತನೆ ಬೀಜದ ಕೊರತೆಯಾಗಿರುವುದಿಲ್ಲ. ಸೋಯಅವರೆಯ ಮಾರುಕಟ್ಟೆ ದರಗಳು ಹೆಚ್ಚಾಳವಾದ ಹಿನ್ನೆಲೆಯಲ್ಲಿ ಹಾಗೂ ಕರ್ನಾಟಕದಲ್ಲಿ ಉತ್ಪಾದಿಸಿದ ಸೋಯಾವರೆ ಬೀಜಗಳು ಮೊಳಕೆ ಪರೀಕ್ಷೆಯಲ್ಲಿ ವಿಫಲವಾದ ಹಿನ್ನೆಲೆಯಲ್ಲಿ ಬೀದರ್ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ ಸೋಯಾಅವರೆ ಬಿತ್ತನೆ ಬೀಜದ ಕೊರತೆ ಉಂಟಾಗಿರುತ್ತದೆ. ಆದರೆ ಸಕಾಲದಲ್ಲಿ ಇಲಾಖೆಯು ಕರ್ನಾಟಕ ರಾಜ್ಯ ಬೀಜ ನಿಗಮದ ಮುಖಾಂತರ ಮಧ್ಯಪ್ರದೇಶ ರಾಜ್ಯಕ್ಕೆ ತೆರಳಿ ಖರೀದಿಸಿ ಸೋಯಾಅವರೆ ಬಿತ್ತನೆ ಬೀಜಗಳ ಪೂರೈಕೆಗೆ ಪರ್ಯಾಯ ವ್ಯವಸ್ಥೆ ಕೈಗೊಂಡು ಸುಮಾರು 16,074 ಕ್ವಿಂಟಾಲ್ ಹೆಚ್ಚುವರಿ JS-335 ತಳಿ ಬಿತ್ತನೆ ಬೀಜಗಳು ಸೇರಿ ಒಟ್ಟು 1,57,817 ಕ್ವಿಂಟಾಲ್ ಇಲಾಖಾ ಕಾರ್ಯಕ್ರಮಗಳಡಿ ರಿಯಾಯಿತಿ ದರದಲ್ಲಿ ಪೂರೈಸಲಾಗಿರುತ್ತದೆ.

ಬೀಜ ಕಾಯ್ದೆಯನ್ವಯ ರೂಪಿಸಲಾಗಿರುವ ನಿಯಮಗಳ ಅನುಷ್ಠಾನ, ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳು ರೈತರಿಗೆ ಲಭ್ಯವಾಗುವ ನಿಟ್ಟಿನಲ್ಲಿ ಕೆಳಕಂಡಂತೆ ಕ್ರಮಗಳನ್ನು ವಹಿಸಲಾಗಿರುತ್ತದೆ.

- ಹೋಬಳಿ, ತಾಲ್ಲೂಕು, ವಿಭಾಗೀಯ ಹಾಗೂ ಜಿಲ್ಲಾಮಟ್ಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಕೃಷಿ ಅಧಿಕಾರಿ, ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರು, ಉಪ ಕೃಷಿ ನಿರ್ದೇಶಕರು ಹಾಗೂ ಜಂಟಿ ಕೃಷಿ ನಿರ್ದೇಶಕರುಗಳನ್ನು ಕೀಟನಾಶಕ ಪರಿವೀಕ್ಷಕರುಗಳನ್ನಾಗಿ ಆಯಾ ಕಾಯ್ದೆಯನ್ವಯ ಅಧಿಸೂಚನೆಗೊಳಿಸಲಾಗಿರುತ್ತದೆ.
- ರಾಜ್ಯ ಸರ್ಕಾರವು ಬೀಜ ಕಾಯ್ದೆ ನಿಯಮಗಳ ಉಲ್ಲಂಘನೆಗಳಿಗೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ರಾಜ್ಯದಲ್ಲಿ ಅಪರ ಕೃಷಿ ನಿರ್ದೇಶಕರ ನೇತೃತ್ವದಲ್ಲಿ ಜಾಗೃತಕೋಶ ರಚಿಸಲಾಗಿರುತ್ತದೆ ಮತ್ತು ಇವರ ಅಧೀನದಲ್ಲಿ ರಾಜ್ಯದ 4 ವಿಭಾಗಗಳಲ್ಲಿ (ಬೆಂಗಳೂರು, ಮೈಸೂರು, ಕಲಬುರ್ಗಿ ಮತ್ತು ಬೆಳಗಾವಿ) ಜಂಟಿ ಕೃಷಿ ನಿರ್ದೇಶಕರು (ಜಾಗೃತ ಕೋಶ) ಕಾರ್ಯನಿರ್ವಹಿಸುತ್ತಿದ್ದಾರೆ.
- ಅಧಿಸೂಚಿಸಿರುವ ಪರಿವೀಕ್ಷಕರು ಅವರ ವ್ಯಾಪ್ತಿಯಲ್ಲಿನ ಬೀಜ ಮಾರಾಟ ಮಳಿಗೆಗಳಿಗೆ ನಿಯಮಿತವಾಗಿ ಭೇಟಿ ನೀಡಿ, ಪರಿಶೀಲನೆಯನ್ನು ಕೈಗೊಂಡು ಕಾಯ್ದೆ ಮತ್ತು ನಿಯಮಗಳ ಉಲ್ಲಂಘನೆ ಕಂಡುಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.

**ಕೃಷಿ ಸಂಬಂಧಿತ ಯೋಜನೆಗಳ ಅನುದಾನ ವಿವರ:**

ಕೃಷಿ ಸಂಬಂಧಿತ ಯೋಜನೆಗಳ ಅನುದಾನದ ವಿವರವು ಈ ಕೆಳಗಿನಂತಿರುತ್ತದೆ

(ರೂ.ಕೋಟಿಗಳಲ್ಲಿ)

| ಆರ್ಥಿಕ ವರ್ಷ | ಕಾರ್ಯಕ್ರಮ | ಬಿಡುಗಡೆ | ವೆಚ್ಚ | ಶೇ.ವೆಚ್ಚ (ಬಿಡುಗಡೆಗೆ) | ಷರಾ |
|---|---|---|---|---|---|
| 2023-24 | 3026.46 | 3741.54 | 3711.84 | 99.21 | ರೂ.297.00 ಕೋಟಿ ಅನುದಾನವನ್ನು ಹೆಚ್ಚುರಿಯಾಗಿ ಪಡೆಯಲಾಗಿರುತ್ತದೆ |
| 2024-25 | 3894.18 | 3649.35 | 3509.96 | 96.18 | |
| 2025-26 (ಜುಲೈ 2025 ರವರೆಗೆ) | 4028.31 | 1709.09 | 826.90 | 48.38 | |

- 2023-24ನೇ ಸಾಲಿನಲ್ಲಿ ಒಟ್ಟು ವಾರ್ಷಿಕ ಗುರಿ(BE) ರೂ.3026.46 ಕೋಟಿಗಳನ್ನು ಒದಗಿಸಿ, ರೂ.3741.54 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದ್ದು, ರೂ.3711.84 ಕೋಟಿಗಳ ವೆಚ್ಚ ಭರಿಸಲಾಗಿರುತ್ತದೆ.
- 2024-25ನೇ ಸಾಲಿನಲ್ಲಿ ಒಟ್ಟು ವಾರ್ಷಿಕ ಗುರಿ(BE) ರೂ.3894.18 ಕೋಟಿಗಳನ್ನು ಒದಗಿಸಿ, ರೂ.3649.35 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದ್ದು, ರೂ.3509.96 ಕೋಟಿಗಳ ವೆಚ್ಚ ಭರಿಸಲಾಗಿರುತ್ತದೆ.
- 2025-26ನೇ ಸಾಲಿನಲ್ಲಿ ಒಟ್ಟು ವಾರ್ಷಿಕ ಗುರಿ(BE) ರೂ.4028.31 ಕೋಟಿಗಳನ್ನು ಒದಗಿಸಿ, ಇಲ್ಲಿಯವರೆಗೆ ರೂ.1709.09 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದ್ದು, ರೂ.826.90 ಕೋಟಿಗಳ ವೆಚ್ಚ ಭರಿಸಲಾಗುತ್ತಿದೆ.

**ಸಹಕಾರ ಇಲಾಖೆ:**

**ಕೃಷಿ ಉತ್ಪನ್ನಗಳ ಬೆಲೆ ಕುಸಿತ:**

2024-25ನೇ ಸಾಲಿಗೆ ರೈತರು ಬೆಂಬಲ ಬೆಲೆಗಿಂತ ಕಡಿಮೆ ದರದಲ್ಲಿ ಹತಾಶರಾಗಿ ಮಾರಾಟ ಮಾಡುವುದನ್ನು ತಪ್ಪಿಸಲು 18 ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳಿಗೆ ರಾಜ್ಯ ಸರ್ಕಾರದಿಂದ ಪ್ರಸ್ತಾವನೆ ಸಲ್ಲಿಸಿ, ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದು, ಕ್ರಮವಹಿಸಲಾಗಿರುತ್ತದೆ.

ಕಳೆದ 05 ವರ್ಷಗಳಿಗೆ ಹೋಲಿಸಿದಾಗ, 2024-25ನೇ ಸಾಲಿನಲ್ಲಿ ಅತೀ ಹೆಚ್ಚಿನ ಕೃಷಿ ಹಾಗೂ ತೋಟಗಾರಿಕಾ ಉತ್ಪನ್ನಗಳನ್ನು ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರೈತರು ಹತಾಶವಾಗಿ ಮಾರಾಟ ಮಾಡುವುದನ್ನು ತಪ್ಪಿಸಲಾಗಿದೆ. (ಸುಮಾರು 50-60% ಖರೀದಿ ಪ್ರಮಾಣ ಹೆಚ್ಚಾಗಿರುತ್ತದೆ.)

2024-25ನೇ ಸಾಲಿನಲ್ಲಿ ಪ್ರಮುಖ ಕೃಷಿ ಉತ್ಪನ್ನಗಳ ಬೆಲೆ ಕುಸಿತ ಸಂದರ್ಭದಲ್ಲಿ ಅಂದಾಜು 12.37 ಲಕ್ಷ ಮೆಟ್ರಿಕ್ ಟನ್ ಪ್ರಮಾಣದ ಉತ್ಪನ್ನಗಳನ್ನು ಅಂದಾಜು ರೂ.7,135 ಕೋಟಿ ಮೊತ್ತದಲ್ಲಿ 6.11 ಲಕ್ಷ ರೈತರಿಂದ ಖರೀದಿಸಲಾಗುತ್ತಿದೆ.

2025-26ನೇ (Marketing Season) ಸಾಲಿಗೆ MIS-PDPS ಯೋಜನೆಯಡಿ ಮಾವು ಉತ್ಪನ್ನದ ಧಾರಣೆ ಕುಸಿದಿರುವುದರಿಂದ, 14,993 ರೈತರಿಂದ 10.24 ಲಕ್ಷ ಕ್ವಿಂಟಾಲ್ ಪ್ರಮಾಣದ ರೂ.41.35 ಕೋಟಿಗಳ ಮೊತ್ತದ ಮಾವು ವಹಿವಾಟಾಗಿದ್ದು, (50:50 ರಾಜ್ಯ & ಕೇಂದ್ರ) MIS-PDPS ಯೋಜನೆಯನ್ನು ದೇಶದಲ್ಲಿಯೇ ಪ್ರಥಮ ಬಾರಿಗೆ ನಮ್ಮ ರಾಜ್ಯದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿರುತ್ತದೆ.

2024-25ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿ ಈ ಕೆಳಕಂಡ ಉತ್ಪನ್ನಗಳಿಗೆ ರಾಜ್ಯ ಸರ್ಕಾರದಿಂದ ಪ್ರೋತ್ಸಾಹಧನವನ್ನು ನಿಗದಿಪಡಿಸಿ, ರೈತರಿಗೆ ಪಾವತಿಸಲಾಗಿರುತ್ತದೆ.

| ಕ್ರ. ಸಂ. | ಉತ್ಪನ್ನ | ಬೆಂಬಲ ಬೆಲೆ (ರೂ.ಗಳಲ್ಲಿ) | ರಾಜ್ಯ ಪ್ರೋತ್ಸಾಹ ಧನ (ರೂ.ಗಳಲ್ಲಿ) | ಫಲಾನುಭವಿ ರೈತರ ಸಂಖ್ಯೆ | ಖರೀದಿಸ ಲಾದ ಪ್ರಮಾಣ | ಪಾವತಿಸಲಾದ ಬೆಂಬಲ ಬೆಲೆ ಮೊತ್ತ | ಒಟ್ಟು ರಾಜ್ಯ ಪ್ರೋತ್ಸಾಹ ಧನ ಮೊತ್ತ | ಒಟ್ಟು ಮೊತ್ತ |
|---|---|---|---|---|---|---|---|---|
| 01 | ಉಂಡೆ ಕೊಬ್ಬರಿ | 12,000/- | 1,500/- | 58,818 | 6,81,073 | 817.29 | 102.16 | 919.45 |
| 02 | ತೊಗರಿ | 7,550/- | 450/- | 1,42,979 | 21,63,127 | 1633.16 | 97.34 | 1730.50 |

2025-26ನೇ ಸಾಲಿಗೆ ಮುಂಗಾರು ಹಂಗಾಮಿಗೆ ಉತ್ಪನ್ನಗಳನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ಈಗಾಗಲೇ ಸೂರ್ಯಕಾಂತಿ, ಹೆಸರುಕಾಳು ಮತ್ತು ಉದ್ದಿನಕಾಳಿನ ಉತ್ಪನ್ನಗಳ ಪ್ರಸ್ತಾವನೆಯನ್ನು ದಿ:17.07.2025 & 21.07.2025 ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಅನುಮೋದನೆ ನಿರೀಕ್ಷಿಸಲಾಗಿರುತ್ತದೆ.

**2025-26ನೇ ಸಾಲಿಗೆ ಕೇಂದ್ರ ಸರ್ಕಾರ ಘೋಷಿಸಲಾಗಿರುವ ಕೃಷಿ ಉತ್ಪನ್ನಗಳ ಬೆಂಬಲ ಬೆಲೆಗಳ ಪಟ್ಟಿ.**

| ಕ್ರ. ಸಂ | ಎಫ್ .ಎ.ಕ್ಯೂ. ಗುಣಮಟ್ಟದ ಉತ್ಪನ್ನಗಳು | ಪ್ರಭೇಧ | 2024-25ನೇ ಸಾಲು | 2025- 26ನೇ ಸಾಲು | ಪ್ರಸ್ತುತ ಸಾಲಿಗೆ ಹೆಚ್ಚಿಸಿದ ಮೊತ್ತ |
|---|---|---|---|---|---|
| 1 | ಭತ್ತ | ಸಾಮಾನ್ಯ | 2,300 | 2,369 | 69 |
| | | ಗ್ರೇಡ್ ಎ | 2,320 | 2,389 | 69 |
| 2 | ಜೋಳ | ಹೈಬ್ರಿಡ್ | 3,371 | 3,699 | 328 |
| | | ಮಾಲ್ದಂಡಿ | 3,371 | 3,749 | 378 |
| 3 | ಸಜ್ಜೆ | F.A.Q | 2,625 | 2,755 | 130 |
| 4 | ರಾಗಿ | F.A.Q | 4,290 | 4,886 | 596 |
| 5 | ಮೆಕ್ಕೆಜೋಳ | F.A.Q | 2,225 | 2,400 | 175 |
| 6 | ತೊಗರಿ | F.A.Q | 7,550 | 8,000 | 450 |
| 7 | ಹೆಸರು | F.A.Q | 8,682 | 8,768 | 86 |
| 8 | ಉದ್ದು | F.A.Q | 7,400 | 7,800 | 400 |
| 9 | ಶೇಂಗಾ | F.A.Q | 6,783 | 7,263 | 480 |
| 10 | ಸೂರ್ಯಕಾಂತಿ | F.A.Q | 7,280 | 7,721 | 441 |
| 11 | ಸೋಯಾಬೀನ್ | F.A.Q | 4,892 | 5,328 | 436 |
| 12 | ಎಳ್ಳು | F.A.Q | 9,267 | 9,846 | 579 |
| 13 | ಹುಚ್ಚೆಳ್ಳು | F.A.Q | 8,717 | 9,537 | 820 |
| 14 | ಹತ್ತಿ | ಮಧ್ಯಮ ಎಳೆ | 7,121 | 7,710 | 589 |
| | | ಉದ್ದನೆಯ ಎಳೆ | 7,521 | 8,110 | 589 |

**2024-25ನೇ ಸಾಲಿನಲ್ಲಿ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿಸಲಾಗಿರುವ ಉತ್ಪನ್ನಗಳ ವಿವರ.**

| ಕ್ರ. ಸಂ | ಉತ್ಪನ್ನದ ಹೆಸರು | ಬೆಂಬಲ ಬೆಲೆ (ಪ್ರತಿ ಕ್ವಿಂಟಾಲ್‌ಗೆ ರೂ.ಗಳಲ್ಲಿ) | ಖರೀದಿ ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ಮೌಲ್ಯ (ರೂ.ಕೋಟಿ ಗಳಲ್ಲಿ) | ಫಲಾನುಭವಿ ಗಳ ಸಂಖ್ಯೆ |
|---|---|---|---|---|---|
| 1 | ಉಂಡೆ ಕೊಬ್ಬರಿ | 12000+1500 | 6,81,073 | 919.45 | 58,818 |
| 2 | ಸೂರ್ಯಕಾಂತಿ (ಮುಂ) | 7,280 | 38,094 | 27.73 | 3,520 |
| 3 | ಶೇಂಗಾ | 6,783 | 20,535 | 13.93 | 2,366 |
| 4 | ಹೆಸರುಕಾಳು | 8,682 | 2,67,559 | 232.29 | 34,862 |
| 5 | ಸೋಯಾಬಿನ್ | 4,892 | 1,82,821 | 89.44 | 14,906 |
| 6 | ಹತ್ತಿ | 7,521 | 25,60,628 | 1,925.85 | 90,103 |
| 8 | ತೊಗರಿ | 7,550 + 450 | 21,63,127 | 1,730.50 | 1,42,979 |
| 7 | ಭತ್ತ | 2,300 | 5,020 | 1.15 | 152 |
| 9 | ರಾಗಿ | 4,290 | 34,60,790 | 1,484.68 | 2,17,036 |
| 10 | ಬಿಳಿಜೋಳ (ಮುಂ) | 3,371 | 11,53,520 | 388.85 | 17,991 |
| 11 | ಬಿಳಿಜೋಳ (ಹಿಂ) | 3,371 | 7,86,760 | 265.22 | 12,918 |
| 12 | ಶುಂಠಿ (MIS) | 2,445 | 1,335 | 0.33 | 42 |
| 13 | ಮಾವು (MIS-PDPS) | 404 | 10,23,541 | 41.35 | 14,993 |
| 14 | ಉದ್ದಿನಕಾಳು | 7,400 | - | - | - |
| 15 | ಒಣಮೆಣಸಿನಕಾಯಿ (PDPS) | 10,589 | - | - | - |
| 16 | ಕಡಲೇಕಾಳು | 5,650 | - | - | - |
| 17 | ಕುಸುಬೆ | 5,940 | - | - | - |
| 18 | ಸೂರ್ಯಕಾಂತಿ (ಹಿಂ) | 7,280 | 21,450 | 15.62 | 1,510 |
| ಒಟ್ಟು | | | 1,23,66,252 | 7,136.38 | 6,12,196 |

**ಇಂಧನ ಇಲಾಖೆ:**

ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಈ ಕೆಳಕಂಡಂತೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ:

- ನಿರಂತರ ಜ್ಯೋತಿ ಯೋಜನೆಯ ಫೀಡರ್ ಗಳಲ್ಲಿ 23 :00 ರಿಂದ 24: ಗಂಟೆಗಳು
- ಗ್ರಾಮೀಣ ಮಿಶ್ರ ಫೀಡರ್ ಗಳಲ್ಲಿ 7 ಗಂಟೆಗಳ 3 ಫೇಸ್ ಮತ್ತು ರಾತ್ರಿ ವೇಳ ಸಿಂಗಲ್ ಫೇಸ್ ವಿದ್ಯುತ್ ಮತ್ತು
- ಕೃಷಿ ಫೀಡರ್ ಗಳಲ್ಲಿ 7 ಗಂಟೆಗಳ 3 ಫೇಸ್ ಮತ್ತು ತೋಟದ ಮನೆಯಿರುವೆಡೆ ಸಂಜೆ 6 ರಿಂದ ಬೆಳಿಗ್ಗೆ, 6 ರವರೆಗೆ ಸಿಂಗಲ್ ಫೇಸ್ ವಿದ್ಯುತ್.

ಕೆಲವೊಮ್ಮೆ ಅನಿವಾರ್ಯ ಸಂದರ್ಭಗಳಲ್ಲಿ ವಿದ್ಯುತ್ ಜಾಲದಲ್ಲಿ ಅಡಚಣೆ ಉಂಟಾದಾಗ ಮಾತ್ರ ತಾತ್ಕಾಲಿಕವಾಗಿ ಅಲ್ಪ ಪ್ರಮಾಣದಲ್ಲಿ ವಿದ್ಯುತ್ ಪೂರೈಕೆ ಅವಧಿಯಲ್ಲಿ ವ್ಯತ್ಯಯ ಉಂಟಾಗುತ್ತದೆ.

ಮುಂದುವರೆದು, ರೈತರ ನೀರಾವರಿ ಪಂಪ್‌ಸೆಟ್ಟಗಳನ್ನು ವ್ಯವಸ್ಥಿತವಾಗಿ ವಿದ್ಯುತ್ ಜಾಲಕ್ಕೆ Solar off grid / Stand-alone ಮೂಲಕ ಹಗಲಿನ ವೇಳೆಯಲ್ಲಿಯೇ ಕೃಷಿ ಪಂಪ್‌ಸೆಟ್ಟಳಿಗೆ ವಿದ್ಯುತ್ ಪೂರೈಸುವ ಉದ್ದೇಶದಿಂದ ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/ ವಿಎಸ್‌ಸಿ/214/2023, ದಿನಾಂಕ:07.10.2023 ರಂದು ಹೊರಡಿಸಲಾಗಿದೆ. ಅದರಂತೆ,

1. ವಿದ್ಯುತ್ ಸರಬರಾಜು ಕಂಪನಿಗಳು ಸಕ್ರಮಗೊಳಿಸಿದ ಕೃಷಿ ಪಂಪ್ ಸೆಟ್ ಗಳಿಗೆ 2022-23 ಮತ್ತು 2023-24 ರಲ್ಲಿ ಟೆಂಡರ್ ಮೂಲಕ ಮೂಲಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ಟೆಂಡರ್ ಕರೆಯಲಾದ ಅಂದಾಜುಪಟ್ಟಿಯನ್ನು ಪುನರ್ ಪರಿಶೀಲಿಸಿ, ಪಂಪ್ ಸೆಟ್ ಗಳು ಹಾಲಿ ಇರುವ ವಿದ್ಯುತ್ ಜಾಲದಿಂದ 500 ಮೀಟರ್ ಯಿಂದಾಚೆಯಿದ್ದಲ್ಲಿ, Solar Stand -alone /off grid ಪಂಪ್ ಅಳವಡಿಸಲು ಕ್ರಮವಹಿಸಲಾಗುತ್ತಿದೆ ಮತ್ತು 500 ಮೀಟರ್ ಒಳಗಿರುವ ಪಂಪ್‌ಸೆಟ್ ಗಳಿಗೆ ಕನಿಷ್ಟ ಅವಶ್ಯಕತೆಗೆ ತಕ್ಕಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಿದ್ಯುತ್ ಸರಬರಾಜು ಕಂಪನಿಗಳು ಕ್ರಮವಹಿಸುತ್ತಿವೆ.

2. ಅಕ್ರಮ-ಸಕ್ರಮ ಯೋಜನೆಯ ಜಾರಿಯಾದ ವರ್ಷ 2005 ರಿಂದ ದಿನಾಂಕ 22.9.2023 ರವರೆಗೆ ಅಕ್ರಮ-ಸಕ್ರಮ ಯೋಜನೆಯಡಿ (2014 ರ ಸುತ್ತೋಲೆಯಂತೆ ಸಾಮಾನ್ಯವಾಗಿ ನೋಂದಣಿಗೊಂಡ ಅರ್ಜಿಗಳೂ ಸೇರಿದಂತೆ) 13.47 ಲಕ್ಷ ಅರ್ಜಿಗಳು ನೋಂದಣಿಗೊಂಡಿದ್ದು, ಈ ಪೈಕಿ 11.23 ಲಕ್ಷ ಪಂಪ್ ಸೆಟ್ ಗಳಿಗೆ ಮೂಲಸೌಕರ್ಯ ಕಲ್ಪಿಸಲಾಗಿದ್ದು, ಬಾಕಿ 2.24 ಲಕ್ಷ ಪಂಪ್ ಸೆಟ್ ಗಳಿಗೆ ಹಂತಹಂತವಾಗಿ ಮೂಲಸೌಕರ್ಯ ಕಲ್ಪಿಸಲಾಗುತ್ತಿದೆ.
3. ಸೌರ ಪಂಪ್‌ಸೆಟ್ ಗಳನ್ನು ಉತ್ತೇಜಿಸಲು ಕೇಂದ್ರ ಸರ್ಕಾರದಿಂದ ಶೇ. 30 ರಷ್ಟು ಸಹಾಯಧನ ಅಲ್ಲದೆ ರಾಜ್ಯ ಸರ್ಕಾರದಿಂದ ಶೇ. 30 ರಷ್ಟು ಇರುವ ಸಹಾಯಧನವನ್ನು ಶೇ. 50 ಕ್ಕೆ ಹೆಚ್ಚಿಸಿ ಸರ್ಕಾರ ಅನುಮೋದಿಸಿದೆ. ರೈತರು ಈಗಾಗಲೇ ವಿದ್ಯುತ್ ಸಂಪರ್ಕಕ್ಕಾಗಿ ಮೊತ್ತವನ್ನು ಪಾವತಿಸಿದ್ದರೆ ಪಾವತಿಸಿದ ಮೊತ್ತವನ್ನು ರೈತರ ವಂತಿಗೆ ಎಂದು ಪರಿಗಣಿಸಿ, ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸಬೇಕಾಗಿದೆ.

ಇದಲ್ಲದೇ, ರೈತರಿಗೆ ಅನುಕೂಲ ಮಾಡಿಕೊಡಲು ದಿನಾಂಕ: 15.04.2025 ರಿಂದ ನವೀಕೃತ ಶೀಘ್ರ ಸಂಪರ್ಕ ಯೋಜನೆಯನ್ನು (NSSY) ಜಾರಿಗೊಳಿಸಲಾಗಿದ್ದು, ರೈತರು ಇಚ್ಛಿಸಿದಲ್ಲಿ HT/LT ಮಾರ್ಗಗಳ ವಿಸ್ತರಣೆಯ ಕಾಮಗಾರಿಯನ್ನು ತಮ್ಮ ಸ್ವಂತ ಖರ್ಚಿನಲ್ಲಿ ನಿರ್ವಹಿಸಿದ ನಂತರ (ರೂ.15,000/- ಮತ್ತು KERC ನಿಯಮಾವಳಿಗಳಂತೆ ಠೇವಣಿ ಹಣವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿ ಮಾಡುವುದರೊಂದಿಗೆ) ವಿದ್ಯುತ್ ಸರಬರಾಜು ಕಂಪನಿಗಳಿಂದ ಸೂಕ್ತ ಸಾಮರ್ಥ್ಯದ ಪರಿವರ್ತಕ ವನ್ನು (TC) 2 ಅಥವಾ ಹೆಚ್ಚಿನ ಸಂಖ್ಯೆಯ ಪಂಪ್‌ಸೆಟ್‌ಗಳನ್ನು ಒಟ್ಟುಗೂಡಿಸಿ ವಿದ್ಯುತ್ ಸಂಪರ್ಕ ನೀಡಲಾಗುವುದು. ತಾಂತ್ರಿಕ ಸಾಧ್ಯತೆಯಿರುವಲ್ಲಿ, ಹಾಲಿ ಇರುವ ಎಲ್.ಟಿ ಜಾಲದಿಂದ service main ಮೂಲಕ ಅಥವಾ ಎಲ್.ಟಿ ಮಾರ್ಗ ವಿಸ್ತರಣೆಯೊಂದಿಗೆ ಸ್ವಯಂ ಕಾರ್ಯ ನಿರ್ವಹಣೆ ಅಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆಯುವ ರೈತರು ಸಹ ರೂ.15,000/- ಮತ್ತು ಠೇವಣಿ ಹಣ ಪಾವತಿಸುವುದು. ಅಂತಹ ರೈತರು ನವೀಕೃತ ಶೀಘ್ರ ಸಂಪರ್ಕ ಯೋಜನೆಯ ವ್ಯಾಪ್ತಿಗೆ ಒಳಪಡುವುದಿಲ್ಲ.

ಪ್ರಸ್ತುತ, ಅಕ್ರಮ ಸಕ್ರಮ ಯೋಜನೆ ಜಾರಿಯಲ್ಲಿರುವುದಿಲ್ಲ. ಅಕ್ರಮ ವಿದ್ಯುತ್ ಸಂಪರ್ಕ ಶಿಕ್ಷಾರ್ಹ ಅಪರಾಧ ಎಂದು ಗ್ರಾಹಕರಿಗೆ ಮನವರಿಕೆ ಮಾಡಿಕೊಡಲಾಗುತ್ತಿದೆ.

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು

ಸಂಖ್ಯೆ: AGRI/287/ACT/2025